ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಕೊಳವೆಬಾವಿ (ಬೋರ್‌ವೆಲ್) ಬತ್ತಿಹೋಗಿದ್ದರಿಂದ ಮತ್ತು ಆ ಭಾಗದಲ್ಲಿ ಫ್ಲೋರೈಡ್ ಹಾಗೂ ಇತರೆ ರಾಸಾಯನಿಕ ಮಿಶ್ರಿತ ನೀರು ಇರುವುದರಿಂದ ಅಲ್ಲಿನ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ ಸಮಸ್ಯಾತ್ಮಕ ಗ್ರಾಮಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತ ಕುಡಿಯುವ ನೀರನ್ನು ಒದಗಿಸಲು ಅಗತ್ಯವಿರುವ ಯೋಜನೆಗಳನ್ನು ಭಾರತ್ ನಿರ್ಮಾಣ್ ಕಾರ್ಯಕ್ರಮದಡಿ ರೂಪಿಸಲಾಗುತ್ತಿದೆ

ಇ) ಬೋರ್‌ವೆಲ್‌ಗಳ ಮುಖಾಂತರ ಈ ಹಿಂದೆ ಮಾಡಿದ್ದ ಕುಡಿಯುವ ನೀರಿನ ಕೊಳವೆ ಬಾವಿಗಳು ಬತ್ತಿ ಹೋಗಿರುವುದಕ್ಕೆ ಪರ್ಯಾಯ ವ್ಯವಸ್ಥೆ ಮಾಡುವ ಬಗ್ಗೆ ಸರ್ಕಾರ ಚಿಂತನೆ ಮಾಡಿದೆಯೇ,

ಹೌದು ಈಗಾಗಲೇ ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಮಿಷನ್‌ನಡಿ 5 – ಯೋಜನೆಗಳನ್ನು ರೂ 965 55 ಲಕ್ಷ ಅಂದಾಜಿನಲ್ಲಿ ಮಂಜೂರು ಮಾಡಲಾಗಿದೆ 2 – ಯೋಜನೆಗಳು ಪೂರ್ಣಗೊಂಡಿದ್ದು ಉಳಿದ 3 – ಯೋಜನೆಗಳು ಪ್ರಗತಿಯಲ್ಲಿವೆ ರೂ 1056 25 ಲಕ್ಷ ಅಂದಾಜಿನ 6 – ಹೊಸ ಯೋಜನೆಗಳಿಗೆ 2006–07ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, 2– ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿಯು ದೊರೆತಿದೆ ಈ ಯೋಜನೆಗಳನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗಿದೆ

ಈ) ಅಫಜಲಪುರ ಮತಕ್ಷೇತ್ರಕ್ಕಾಗಿ 4 ಕುಡಿಯುವ ನೀರಿನ ಯೋಜನೆಗಳನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಕಳುಹಿಸಲಾಗಿರುವ ಯೋಜನೆಗಳನ್ನು 2006–07ನೇ ಸಾಲಿನಲ್ಲಿ ಕಾರ್ಯಗತ ಮಾಡಲಾಗುವುದೇ?

ಅಫಜಲಪುರ ತಾಲ್ಲೂಕಿನ ಬೊಬ್ಬೂರು, ಮಾಸಾಳು, ರೇವೂರು ಹಾಗೂ ಮಲ್ಲಬಾದ್ ಸೇರಿದಂತೆ 4 – ಯೋಜನೆಗಳ ಅಂದಾಜು ಪಟ್ಟಿ ತಯಾರಿಸಲಾಗುತ್ತಿದ್ದು, ಆರ್ಥಿಕ ಮತ್ತು ತಾಂತ್ರಿಕ ಕಾರ್ಯ ಸಾಧುತ್ವದ ಆಧಾರದ ಮೇಲೆ ಅನುಮೋದನೆ ನೀಡಲು ಪರಿಶೀಲಿಸಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1204(1297)**
ಸದಸ್ಯರ ಹೆಸರು	**ಶ್ರೀ ಪಾಟೀಲ್ ಎಂ ವೈ(ಆಫ್ಜಲ್ ಪುರ್)**
ಉತ್ತರಿಸುವವರು	**ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು, ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)**

ಅ) ಅಫಜಲಪುರ ತಾಲ್ಲೂಕಿನಲ್ಲಿ ರೇಣುಕಾ ಸಕ್ಕರೆ ಕಾರ್ಖಾನೆ ಸ್ಥಾಪಿಸಿರುವುದು ಸರ್ಕಾರದವರಿಗೆ ಗೊತ್ತಿದೆಯೆ,

ಗೊತ್ತಿದೆ ಈ ಕಾರ್ಖಾನೆಯ ಸ್ಥಾಪನೆಗೆ ಸರ್ಕಾರದ ಆದೇಶ ಸಂಖ್ಯೆ ಸಿಐ15 ಎಸ್‌ಜಿಎಫ್ 06 ದಿನಾಂಕ 26 12 06ರಲ್ಲಿ ಅನುಮತಿ ನೀಡಲಾಗಿದೆ

ಆ) ಕಾರ್ಖಾನೆ ಸ್ಥಾಪಿಸಲು ಬೇಕಾಗುವ ಜಮೀನು ಕೃಷಿಯೇತರವನ್ನಾಗಿ(Non Agriculture) ಮಾಡಿಕೊಳ್ಳಲಾಗಿದೆಯೇ,

ಶ್ರೀ ರೇಣುಕಾ ಶುಗರ್ಸ್(ಲಿ) ಸಕ್ಕರೆ ಕಾರ್ಖಾನೆ ಸ್ಥಾಪನೆಗಾಗಿ ಶ್ರೀ ಸಿದ್ದರಾಮ ತಂದೆ ಮೇಳಪ್ಪ ಕಲೂತಿ ಇವರ ಹೆಸರಿನಲ್ಲಿ ಒಟ್ಟು 133 ಎಕರೆ 17 ಗುಂಟೆ ಜಮೀನನ್ನು ಖರೀದಿಸಿದ್ದು, ಇದರಲ್ಲಿ ಕೇವಲ 0 10 ಎಕರೆ ಮಾತ್ರ ಕೃಷಿಯೇತರ ಜಮೀನಾಗಿ ಪರಿವರ್ತಿಸಿಕೊಂಡಿರುತ್ತಾರೆ

ಇ) ದರ ಅನೇಕ ಕಟ್ಟಡಗಳ ನಿರ್ಮಾಣಕ್ಕಾಗಿ ಪಂಚಾಯತ್‌ಗೆ ಶುಲ್ಕ ಕಟ್ಟಿ ನೀಲಿ ನಕ್ಷೆ ತಯಾರಿಸಿ ಪಂಚಾಯಿತಿಯ ಅನುಮತಿ ಪಡೆದುಕೊಳ್ಳಲಾಗಿದೆಯೇ,

ಈ ಕಾರ್ಖಾನೆ ಕಲ್ಲೂರ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತಿದ್ದು ಕಟ್ಟಡ ನಿರ್ಮಾಣಕ್ಕಾಗಿ ಪಂಚಾಯಿತಿಗೆ ಶುಲ್ಕ ಕಟ್ಟಿಲ್ಲದಿರುವುದು ಹಾಗೂ ನೀಲಿ ನಕ್ಷೆ ತಯಾರಿಸಿ, ಪಂಚಾಯಿತಿಗೆ ಸಲ್ಲಿಸಿ ಅನುಮತಿ ಪಡೆದಿಲ್ಲದಿರುವುದು ತಿಳಿದುಬಂದಿದೆ

ಈ) ನೀರು ಬಳಕೆಯ ತೆರಿಗೆ ಮುಂತಾದವುಗಳನ್ನು ಪಂಚಾಯಿತಿಗೆ ತುಂಬಲಾಗಿದೆಯೇ,

ನೀರು ತೆರಿಗೆ ಮುಂತಾದವುಗಳನ್ನು ಪಂಚಾಯಿತಿಗೆ ತುಂಬಿಲ್ಲದಿರುವುದು ತಿಳಿದು ಬಂದಿದೆ

ಉ) ಹಾಗಿದ್ದಲ್ಲಿ, ಅಕ್ರಮವಾಗಿ ಸ್ಥಾಪನೆಗೊಂಡ ಕಾರ್ಖಾನೆಯ ಬಗ್ಗೆ ಸರ್ಕಾರದ ಕ್ರಮವೇನು?

ಕಾರ್ಖಾನೆ ಸ್ಥಾಪನೆಗೆ ಸರ್ಕಾರದ ಅನುಮತಿ ನೀಡಲಾಗಿದೆ ವ್ಯವಸಾಯ ಭೂಮಿಯನ್ನು ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸುವುದು ಕಂದಾಯ ಇಲಾಖೆಯಡಿ ಬರುತ್ತದೆ ಪಂಚಾಯಿತಿಯಿಂದ ಕಟ್ಟಡ ನಿರ್ಮಾಣದ ನಕ್ಷೆಗೆ ಅನುಮೋದನೆ ಪಡೆದುಕೊಳ್ಳುವುದು ಹಾಗೂ ನೀರಿನ ತೆರಿಗೆ ಪಾವತಿ ವಿಷಯವು ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತವೆ ನಿಯಮಗಳ ಉಲ್ಲಂಘನೆಯಾಗಿರುವ ಪ್ರಕರಣಗಳಲ್ಲಿ ಸೂಕ್ತ ಕ್ರಮವನ್ನು ಜರುಗಿಸಲು ಜಿಲ್ಲಾಧಿಕಾರಿಗಳು ಗುಲ್ಬರ್ಗಾ, ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯಿತಿ ಗುಲ್ಬರ್ಗಾರವರಿಗೆ ಸೂಚನೆ ನೀಡಲಾಗಿದೆ